


## ವಿಷ್ಣು, ಅಶ್ವತ್ಥ್ ಸಂಗ್ರಹಯೋಗ್ಯ ಸಂಚಿಕೆ

ಚಿತ್ರ ನಟ ವಿಷ್ಣುವರ್ಧನ್ ಬಗ್ಗೆ ಅಂಬರೀಷ್, ರಮೇಶ್, ಅಶ್ವತ್ಥ್, ಬನ್ನಂಜೆ ಮತ್ತು ತಾರಾ–ತಮ್ಮ ನೆನಪುಗಳನ್ನು ಭಿನ್ನ ಭಿನ್ನ ದೃಷ್ಟಿಕೋನಗಳಿಂದ ಹಂಚಿಕೊಂಡಿದ್ದಾರೆ. ಆ ಒಬ್ಬೊಬ್ಬರ ನೆನಪುಗಳೂ ಅಗಲಿದ ನಟನನ್ನು ಬೇರೆ ಬೇರೆ ರೀತಿಯಿಂದ ಪರಿಚಯಿಸುತ್ತವೆ ಮತ್ತು ವಿಷ್ಣುವರ್ಧನರ ತೆರೆಯ ಮರೆಯ ಇನ್ನೊಂದು ವ್ಯಕ್ತಿತ್ವವನ್ನು ತೆರೆದಿಡುತ್ತವೆ. ತರವಲ್ಲ ತಗಿ ಕಂಚಿನ ಕಂಠದ ಸಿ.ಅಶ್ವತ್ಥ್ ನೆನಪೂ ಸೇರಿದಂತೆ ಸುಧಾ ಸಂಗ್ರಹಯೋಗ್ಯ ಸಂಚಿಕೆಯಾಗಿ ಮೂಡಿಬಂದಿದೆ. ಬೇಗ ಅಂದರೆ ಸೋಮವಾರ ಮಾರುಕಟ್ಟೆಗೆ ಬಂದದ್ದು ಸಂತಸ ಮೂಡಿಸಿತು. ಮುಂದೆ ಕೂಡ ಸೋಮವಾರ ಅಥವಾ ಮಂಗಳವಾರ ಮಾರುಕಟ್ಟೆಗೆ ಬರುವಂತಾಗಲಿ.

–ಕೇಶವ ಪೆರಾಜೆ, ಮಡಿಕೇರಿ/ ಡಿ.ಆರ್.ಮಂಜುನಾಥ, ದೇಬೂರು/ ವಿ.ಅರ್ಜುನ್, ಮಂಡ್ಯ/ ನೀತಾ ಸುಂಕದ, ಹುಬ್ಬಳ್ಳಿ/ ಎನ್.ವಿ.ಶ್ರೀನಿವಾಸ್, ಮೈಸೂರು/ ಎಂ.ವಿ.ಶ್ರೀನಿವಾಸ, ಚನ್ನಗಿರಿ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಪಿ.ಗೋವಿಂದರಾಜ್, ಎಚ್.ಎಚ್.ವಿಶ್ವನಾಥ್, ಶಿವಮೊಗ್ಗ/ ರಾಘವೇಂದ್ರರಾವ್ ಕುಲಕರ್ಣಿ, ಜೇವರ್ಗಿ/ ಪ್ರಶಾಂತ ಮಯ್ಯ, ಸಾಗರ/ ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು/ ವಿಭಾ ಮುರಳೀಧರ್, ತುಮಕೂರು/ ಕೆ.ಮಂಜುನಾಥ್, ನೆ.ಲ.ರಾಂ, ಎಚ್.ಪ್ರಹ್ಲಾದರಾವ್, ಕೋಟೇಶ್ವರ ಸೂರ್ಯನಾರಾಯಣ ರಾವ್, ಬಿ.ಎಸ್.ಚಂದ್ರಶೇಖರ್, ಬೆಂಗಳೂರು

## ವಿಪರ್ಯಾಸ!

ವಿಷ್ಣುವರ್ಧನ್ ಬಗೆಗೆ ಬನ್ನಂಜೆಯವರ ಉಕ್ತಿ– 'ಲೌಕಿಕ ಜೀವನ ಬೇಡ ಎನ್ನುವ ಮನಃಸ್ಥಿತಿಯೇ ಅವರನ್ನು ಸಾವಿನ ಹೊಸ್ತಿಲಿಗೆ ಕರೆದೊಯ್ದಿರಬೇಕು'– ವಿಚಿತ್ರವೆನಿಸುತ್ತದೆ. ಬದುಕಿಸಬೇಕಾದ ಆಧ್ಯಾತ್ಮ ಸಾಯಿಸುತ್ತದೆ ಎನ್ನುವುದಾದರೆ, ಅದೆಂಥ ಅಧ್ಯಾತ್ಮ! (ಹುಸಿ ಅಧ್ಯಾತ್ಮವಿರಬೇಕು).

–ಸಿ.ಪಿ.ಕೆ. ಮೈಸೂರು

## ನಿರ್ದೇಶಕರು ರಾಜೇಂದ್ರಬಾಬು

ಅಂಬರೀಶ್ ಹೇಳಿದಂತೆ ಹಬ್ಬ ಹಬ್ಬ ಚಿತ್ರದ ನಿರ್ದೇಶಕರು ಡಿ.ರಾಜೇಂದ್ರಬಾಬು. ರಾಘವೇಂದ್ರರಾವ್ ನಿರ್ದೇಶಿಸಿದ್ದು ಶ್ರೀ ಮಂಜುನಾಥ. ಇಷ್ಟೆಲ್ಲ ಮಾತನಾಡಿದ್ದು ಬುಧವಾರ ಮಧ್ಯಾಹ್ನ (ಡಿ.30) ಎಂದಿದ್ದಾರೆ. ಅದು ತಪ್ಪು, ಮಂಗಳವಾರ ಮಧ್ಯಾಹ್ನ (ಡಿ.29) ಎಂದಿರಬೇಕು.

ಕಿರಣ್ ಬತೇರಿ, ಬೆಂಗಳೂರು




## ಗುರುವಾರ ಬಂತಮ್ಮಾ...

ಆಗ ನಾನು ಬಳ್ಳಾರಿಯಲ್ಲಿದ್ದೆ. ನಮ್ಮ ಮನೆಗೆ 'ಡೆಕ್ಕನ್ ಹೆರಾಲ್ಡ್' ಪತ್ರಿಕೆ ಹಾಕುತ್ತಿದ್ದ ಹುಡುಗ, 'ಇವರದ್ದೇ ಒಂದು ಹೊಸ ವಾರಪತ್ರಿಕೆ "ಸುಧಾ" ಬಂದಿದೆ ಹಾಕಲಾ?' ಎಂದು ಕೇಳಿದಾಗ, ನಾನು 'ಹೂಂ' ಎಂದೆ.

ಅಂದಿನಿಂದ ಇಂದಿನವರೆಗೂ ಅವಿರತವಾಗಿ ಸಾಗಿದೆ ನನ್ನ ಹಾಗೂ 'ಸುಧಾ'ಳ ಸಂಬಂಧ! 'ಸುಧಾ' ಬರುವ ದಿನವನ್ನೇ ಕಾತುರದಿಂದ ಕಾಯುವ ನನಗೆ 'ಗುರುವಾರ ಬಂತಮ್ಮಾ..' ಹಾಡು ಹೊಸ ಅರ್ಥ ಕೊಟ್ಟಿದೆ!

–ಡಾ. ಲೀಲಾವತಿ ದೇವದಾಸ್, ಬೆಂಗಳೂರು

## ನಮ್ಮನ್ನು ಬೆಳೆಸಿರುವೆ

ಸುಧಾ ಮೊದಲ ಸಂಚಿಕೆಯ ಮುಖಪುಟವನ್ನು ಮತ್ತೆ ನೋಡಿ ರೋಮಾಂಚನವಾಯಿತು! 'ಸುಧಾ'ಕ್ಕ ನೀನು ಬೆಳೆಯುವ ಜೊತೆಗೆ ನಮ್ಮನ್ನು ತುಂಬಾ ಅಕ್ಕರೆಯಿಂದ ಮುತುವರ್ಜಿಯಿಂದ– ತಾಯಿಯ ಮಮತೆ ಕೊಟ್ಟು ಬೆಳೆಸಿದ್ದಿ. ಹಾಗೆ ತಿದ್ದಿ–ತೀಡಿರುವೆ.

–ತರಂಗಿಣಿ, ತುಮಕೂರು/ ಡಿ.ಎಸ್ ಪಂಕಜ ಸುಬ್ರಮಣ್ಯಂ, ಗಾಯತ್ರಿ, ಬೆಂಗಳೂರು/ ಶ್ರೀರಾಮ ಮಡಿಮಣ್ ಹಳ್ಳೆದ್ದಿ, ಕಂಬದಕೋಣೆ/ ಎ.ಕೆ. ಪಟ್ಟಾಭಿ, ಬೆಂಗಳೂರು/ ಪರಮೇಶ್ವರಿ ಲೋಕೇಶ್ವರ್, ಮಂಗಳೂರು

ಸುಧಾ ಮೊದಲ ಪತ್ರಿಕೆ 11ನೇ ಜನವರಿ 1965 ಎಂದಾದರೆ, 45 ತುಂಬಿ 46ಕ್ಕೆ ಕಾಲಿಟ್ಟಂತೆ. 44 ಅಲ್ಲ.

ಬಿ.ಜೆ.ರಘುಪತಿ, ಬೆಂಗಳೂರು

ಹೌದು. – ಸಂ.



